ದಿಃ 05-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು ಶ್ರೀ. ಕೆ.ಎಸ್.ಆರ್ ಪ್ರತಿವಾದಿಗಳ ಪರ ವಕೀಲರಿಂದಃ</u>

ದಾವಾ ಆಸ್ತಿಯು ಕೋಟೆ ಪ್ರದೇಶದಲ್ಲಿರುತ್ತದೆ. ದಾವಾ ಆಸ್ತಿಯು ಇರುವ ಲೇಔಟ್ ನ ಹೆಸರು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ನಾನು ಮತ್ತು 2 ನೇ ವಾದಿಯು ಸೇರಿ ಖರೀದಿಸಿರುತ್ತೇವೆ. 2 ನೇ ವಾದಿಯು ಈ ದಾವೆಯಲ್ಲಿ ಸಾಕ್ಷಿ ನುಡಿದಿರುವುದಿಲ್ಲ. 2 ನೇ ವಾದಿಯು ಈ ದಾವೆಯಲ್ಲಿ ಎಂದಿಗೂ ಹಾಜರಾಗಿರುವುದಿಲ್ಲ. ಈ ದಾವೆಯನ್ನು 2 ನೇ ವಾದಿ ಪರ ಮುಂದುವರೆಸುವುದಾಗಿ ಅವರಿಂದ ಮುಕ್ತಾರು ನಾಮೆಯನ್ನು ನಾನು ಬರೆಸಿಕೊಂಡಿರುವುದಿಲ್ಲ.. ಈ ದಾವೆಯಲ್ಲಿ ನೀವೆ ನಡೆಸಿ ಎಂದು 2 ನೇ ವಾದಿಯು ನನಗೆ ಹೇಳಿರುತ್ತಾರೆ. 2 ನೇ ವಾದಿಯು ನನಗೆ ದಾವೆಯನ್ನು ನಡೆಸಲು ಲಿಖಿತ ರೂಪದಲ್ಲಿ ಬರೆದುಕೊಟ್ಟಿರುವುದಿಲ್ಲ. . ದಾವಾ ಆಸ್ತಿಯು ಇರುವ ಲೇಔಟ್ ಅನ್ನು ಯಾರು ಮಾಡಿದರು ಎಂಬುದು ನನಗೆ ಗೊತ್ತಿಲ್ಲ. ಸದರಿ ಲೇಔಟ್ ನಲ್ಲಿ ಒಟ್ಟು ಎಷ್ಟು ಸೈಟ್ ಗಳು ಇವೆ ಎಂಬುದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಅದಕ್ಕೆ ಸಂಬಂಧಪಟ್ಟ ಟೌನ್ ಪ್ಲಾನಿಂಗ್ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ.. ದಾವಾ ಆಸ್ತಿಯ ಸೈಟ್ ನಂ. 20 ಆಗಿರುತ್ತದೆ. ದಾವಾ ಆಸ್ತಿಯು ಲೇಔಟ್ ನ ಉತ್ತರ ದಿಕ್ಕಿನ ಕೋನೆಯಲ್ಲಿ ಇರುತ್ತದೆ. ನನ್ನ ಮನೆಯು ದಾವಾ ಆಸ್ತಿಯ ಪಕ್ಕದಲ್ಲಿರುತ್ತದೆ. ದಾವಾ ಆಸ್ತಿಯ ದಕ್ಷಿಣಕ್ಕೆ ರಸ್ತೆ ಇರುತ್ತದೆ. ದಾವಾ ಆಸ್ತಿಯ ಉತ್ತರಕ್ಕೆ ಬಿ.ಎನ್.ಆರ್ ಲೇಔಟ್ ಇರುತ್ತದೆ. ದಾವಾ ಆಸ್ತಿಯ ಖಾಲಿ ಸೈಟಿನ ಛಾಯಾ ಚಿತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಾವಾ ಆಸ್ತಿಯ ಆಕಾರ ಪೂ-ಪ 14 ಮೀಟರ್ ಹಾಗೂ ಉ-ದ 13+10/2 ಇರುತ್ತದೆ. ಸಾಕ್ಷಿಯು ನಿಪಿ-7 ರಲ್ಲಿ ತಮ್ಮ ಸೈಟಿನ ನಕ್ಷೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎ ಎಂದು ಗುರುತಿಸಲಯಿತು. ನಿಪಿ-7 ರ ಪ್ರಕಾರ ದಾವಾ ಆಸ್ತಿಗೆ 4 ಮೂಲೆಗಳು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅಳತೆ ಪ್ರಕಾರ 4 ಮೂಲೆಗಳು ಇವೆ ಎಂದು ನುಡಿಯುತ್ತಾರೆ.

**<u>(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು)</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು